ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರಃ 2117/2019

ಚಾಸಾಃ27 ಪ್ರಾಸಾಃ9

ದಿನಾಂಕಃ 18.02.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಪರಮೇಶ್ವರ |
| ತಂದೆಯ ಹೆಸರು | : | ರಾಮ ಗುಣಗ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ್ತ ಪೊಲೀಸ್ ಇನ್ಸಪೆಕ್ಟರ್ |
| ವಾಸ ಸ್ಥಳ | : | ಕುಮಟಾ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ನಾನು 21-10-2017 ರಿಂದ 25-09-2019ರವರೆಗೆ ಬೈಂದೂರು ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 24.04.2019 ರಂದು ಈ ಪ್ರಕರಣದ ಕಡತವನ್ನು ಚಾಸಾ-26ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ. ಅಪಘಾತದಲ್ಲಿ ಗಾಯಗೊಂಡ ಸಾಕ್ಷಿದಾರರಾದ ಚಾಸ.3 ರಿಂದ 5 ರವರನ್ನು ವಿಚರಿಸಿ ಅವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಚಾಸ.1ರವರು ವಿಚಾರಿಸಿ ಅವರ ಮರುಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ26.04.2019 ರಂದು ಅಪಘಾತಪಡಿಸಿದ ಬುಲೆರೋ ವಾಹನ ನಂ.ಕೆಎ-20-ಪಿ-9867 ನೇದರ ಆರ್.ಸಿ ಮಾಲೀಕರಾದ ಚಾಸ.7ರವರು ಠಾಣೆಗೆ ಹಾಜರಾಗಿದ್ದು, ಐ ಎಮ್ ವಿ ರಡಿಯಲ್ಲಿ ತಿಳುವಳಿಕೆ ಹೊರಡಿಸಿ ಅವರಿಂದ ಉತ್ತರ ಪಡೆದು, ಹಾಜರುಪಡಿಸಿದ ದಾಖಲೆಗಳನ್ನು ಕಡತಕ್ಕೆ ಅಳವಡಿಸಿರುತ್ತೇನೆ. ಬುಲೆರೋ ವಾಹನವನ್ನು ಬಿಟ್ಟುಕೊಡಲು ಕೋರಿಕೊಂಡಂತೆ ಆರ್ ಟಿ ಓ ನಿರೀಕ್ಷಣೆ ಆದ ಮೇರೆಗೆ ಅವರಿಗೆ ಸದ್ರಿ ವಾಹನವನ್ನು ಇಂಡೆಮಿನಿಟಿ ಬಾಂಡಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ.

ದಿಃ01.05.2019 ರಂದು ವಾಹನ ನಂ.ಕೆಎ-20/ಇಕೆ-8825 ಇವಿಯಸ್ ಜುಪಿಟರ್ ನ ಆರ್.ಸಿ ಮಾಲೀಕನಾದ ಕೆ. ಜೆ. ತಂಗಚನ್ ರವರು ಠಾಣೆಗೆ ಹಾಜರಾಗಿದ್ದು, ಐ ಎಮ್ ವಿ ರಡಿಯಲ್ಲಿ ತಿಳುವಳಿಕೆ ಹೊರಡಿಸಿ ಅವರಿಂದ ಉತ್ತರ ಪಡೆದು, ಹಾಜರುಪಡಿಸಿದ ದಾಖಲೆಗಳನ್ನು ಕಡತಕ್ಕೆ ಅಳವಡಿಸಿರುತ್ತೇನೆ. ಬುಲೆರೋ ವಾಹನವನ್ನು

ಬಿಟ್ಟುಕೊಡಲು ಕೋರಿಕೊಂಡಂತೆ ಆರ್ ಟಿ ಓ ನಿರೀಕ್ಷಣೆ ಆದ ಮೇರೆಗೆ ಅವರಿಗೆ ಸದ್ರಿ ವಾಹನವನ್ನು ಇಂಡೆಮಿನಿಟಿ ಬಾಂಡಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ.

ದಿಃ26.06.2019 ರಂದು ಮೃತ ಮೊಹಮ್ಮದ್ ಹುಸೇನ್, ಮೊಹಮ್ಮದ್ ಸಾಧೀರ್ ಹಾಗೂ ಭರತ್ ರವರ ಶವ ಪರೀಕ್ಷಾ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ.

ಗಾಯಾಳುಗಳಾದ ಚಾಸಾ.1, 3 ರಿಂದ 5 ರವರ ಗಾಯದ ದೃಢಪತ್ರವನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ. ಐ ಎಮ್ ವಿ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ನಂತರ ಆರೋಪಿಯ ವಿರುದ್ದ ಸಾಕಷ್ಟು ಸಾಕ್ಷ್ಯಧಾರಗಳು ಲಭ್ಯವಾಗಿದ್ದರಿಂದ ಆರೋಪಿಯ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ಇಂಡೆಮ್ನಿಟಿ ಬಾಂಡಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.29 ಎಂದು, ನಿಪಿ.14 ರಿಂದ 29 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.14(ಬಿ) ರಿಂದ ನಿಪಿ.16(ಬಿ) ಎಂದು, ನಿಪಿ.17(ಎ) ರಿಂದ 23(ಎ) ಎಂದು ಗುರುತಿಸಲಾಯಿತು. ನಿಪಿ.8 ರಲ್ಲಿ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

<u>ವಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಚಾಸಾ.1 ರಿಂದ 5 ರವರ ಹೇಳಿಕೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ನಾನು ಪಡೆದಿಲ್ಲ. ಅಪಘಾತದಿಂದ ಸದ್ರಿ ಸಾಕ್ಷಿದಾರರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಅವರ ಗಾಯದ ಪ್ರಮಾಣಪತ್ರಗಳನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ ಎಂದರೆ ಸರಿ. ಸದ್ರಿ ಸಾಕ್ಷಿದಾರರ ಹೇಳಿಕೆಗಳನ್ನು ನಮ್ಮ ಕಚೇರಿಯಲ್ಲಿ ದಾಖಲಿಸಿರುತ್ತೇನೆ. ಸದ್ರಿ ಹೇಳಿಕೆಗಳನ್ನು ಅಪಘಾತವಾದ 3ನೇ ದಿನಕ್ಕೆ ದಾಖಲಿಸಿರುತ್ತೇನೆ ಎಂದರೆ ಸರಿ. ಸದ್ರಿ ವ್ಯಕ್ತಿಗಳು ಆಸ್ಪತ್ರೆಯಲ್ಲಿ ಯಾವ ದಿನದಿಂದ ಯಾವ ದಿನಾಂಕದವರೆಗೂ ಚಿಕಿತ್ಸೆ ಪಡೆದಿದ್ದಾರೆ ಎಂಬ ಬಗ್ಗೆ ಹೇಳಿಕೆಯಲ್ಲಿ ದಾಖಲಿಸಿಲ್ಲ. ಗಾಯಾಳುಗಳ ಹೇಳಿಕೆಗಳನ್ನು ಆಸ್ಪತ್ರೆಯಿಂದ ಹೊರಗೆ ದಾಖಲಿಸುವ ವೇಳೆಯಲ್ಲಿ ಅವರು ಚಿಕಿತ್ಸೆ ಪಡೆದ ವೇಳೆಯನ್ನು ದಾಖಲಿಸಬೇಕಾಗಿತ್ತು ಎಂದರೆ ಸರಿಯಲ್ಲ. ನಾನು ಹೇಳಿದ ದಿನದಂದು ಸದ್ರಿ ಸಾಕ್ಷಿದಾರರ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದರು

ಎಂದರೆ ಸರಿಯಲ್ಲ. ಅವರೆಲ್ಲರೂ ದಿನಾಂಕ 24.04.2019 ರ ನಂತರವೂ ಒಳರೋಗಿಯಾಗಿ ದಾಖಲಾಗಿದ್ದು, ಅವರ ಹೇಳಿಕೆಗಳನ್ನು ನಾನು ದಾಖಲಿಸಿಕೊಳ್ಳದೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಅಂತಹ ಯಾವುದೇ ಹೇಳಿಕೆಗಳನ್ನು ದಾಖಲಿಸಿಕೊಳ್ಳದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಉಲ್ಲೇಖಿಸಿದಂತೆ ಸಾಕ್ಷಿದಾರರು ನನ್ನ ಸಮಕ್ಷಮ ಹೇಳಿಕೆ ನೀಡಲು ಹಾಜರಾಗಿಲ್ಲ ಎಂದರೆ ಸರಿಯಲ್ಲ. ಚಾಸಾ.3 ರವರು ಕೇರಳ ಮೂಲದವರು ಎಂದರೆ ಸರಿ. ಅವರು ಯಾವ ಭಾಷೆಯಲ್ಲಿ ಹೇಳಿಕೆ ನೀಡಿರುತ್ತಾರೆ ಎಂಬ ಬಗ್ಗೆ ಉಲ್ಲೇಖಿಸಿಲ್ಲ.

ಅಂತಿಮ ವರದಿಯನ್ನು ಸಲ್ಲಿಸುವ ಮೊದಲು ಹಿಂದಿನ ತನಿಖಾಧಿಕಾರಿಯವರು ನಡೆಸಿದ ಪ್ರಕ್ರಿಯೆಯನ್ನು ಪರಿಶೀಲಿಸಿರುತ್ತೇನೆ. ನಕ್ಷೆಯಲ್ಲಿ ಅದು ತಯಾರಾದ ಸಮಯವನ್ನು ನಮೂದಿಸಿಲ್ಲ. ನಿಪಿ.4ರಲ್ಲಿ ಟಿವಿಯಸ್ ಜುಪೀಟರ್ ವಾಹನ ಕಂಡು ಬರುವುದಿಲ್ಲ. ಆದರೆ ನಿಪಿ.3 ರಲ್ಲಿ ಅದು ಸ್ಥಳದಲ್ಲಿದ್ದ ಬಗ್ಗೆ ಉಲ್ಲೇಖಿಸಿರುತ್ತಾರೆ ಎಂದರೆ ಸರಿ. ಆ ರೀತಿ ಉಲ್ಲೇಖಿಸಿರುವ ಕಾರಣ ನಕ್ಷೆಯಲ್ಲಿ ಸದ್ರಿ ವಾಹನ ಗುರುತಿಸಬೇಕಾಗಿತ್ತು ಎಂದರೆ ಸರಿ. ಆದ್ದರಿಂದ ಅದು ತನಿಖಾ ಪ್ರಮಾದ ಎಂದರೆ ಸರಿಯಲ್ಲ. ನಕ್ಷೆಯಲ್ಲಿ ಗಾಜಿನ ಚೂರುಗಳು ಎಲ್ಲಿ ಬಿದ್ದಿದ್ದವು ಎಂದು ಪಂಚನಾಮೆಯಲ್ಲಿ ಕಾಣಿಸಿರುವಂತೆ ಚಿತ್ರಿಸಿಲ್ಲ ಎಂದರೆ ಸರಿ. ನಕ್ಷೆಯಲ್ಲಿ ಅಪಘಾತವಾದ ಸ್ಥಳದಲ್ಲಿ ವಾಹನಗಳು ಬಿದ್ದ ಗೀರಿನ ಗುರುತು ಇದೆ ಎಂದು ಕಾಣಿಸಿದೆ ಎಂದರೆ ಸರಿ. ನಕ್ಷೆಯ ಪ್ರಕಾರ ಬುಲೆರೋ ವಾಹನ ರಸ್ತೆಯ ಬಲಭಾಗದಲ್ಲಿ ಹೋಗುತ್ತಿದ್ದಂತೆ ಕಂಡು ಬರುತ್ತದೆ ಎಂದರೆ ಸರಿ. ಜುಪೀಟರ್ ಮತ್ತು ಬುಲೆರೋ ವಾಹನಗಳ ಗೀರಿದ ಗುರುತುಗಳ ನಡುವೆ ಎಷ್ಟು ಅಂತರ ಇದೆ ಎಂದು ನಕ್ಷೆಯಲ್ಲಿ ಕಾಣಿಸಿಲ್ಲ ಎಂದರೆ ಸರಿ. ಘಟನಾ ಸ್ಥಳದಿಂದ ಬುಲೆರೋ ವಾಹನದ ರಸ್ತೆಯ ಮೇಲಾದ ಗುರುತುಗಳ ನಡುವಿನ ಅಂತರವನ್ನು ಕಾಣಿಸಿಲ್ಲ.

ಅಪಘಾತವಾದ ಐದುವರೆ ಗಂಟೆಯ ನಂತರ ಪಂಚನಾಮೆಯನ್ನು ಜರುಗಿಸಿರುತ್ತೇವೆ. ನಮ್ಮ ಠಾಣೆಯಿಂದ ಅಪಘಾತ ಸ್ಥಳವು 1 ಕಿ.ಮೀ. ದೂರದಲ್ಲಿದೆ. ನಿಪಿ.6 ನ್ನು ಪಂಚನಾಮೆ ವೇಳೆಗೆ ತೆಗೆಯಲಾಗಿದೆ. ಅದರಲ್ಲಿ ಅಪಘಾತದಲ್ಲಿ ಒಳಗೊಂಡ ವಾಹನಗಳು, ಗಾಜಿನ ಚೂರುಗಳು ಅಥವಾ ಅದರ ಗೀರಿನ ಗುರುತುಗಳು ಕಂಡು ಬರುವುದಿಲ್ಲ. ಆದ್ದರಿಂದ ಪಂಚನಾಮೆಯಲ್ಲಿ ಗುರುತಿಸಿದ ಅಂಶಗಳು ನಿಪಿ.6 ರಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿ.

ನಿಪಿ.3 ಮತ್ತು 4 ನ್ನು ಕಚೇರಿಯಲ್ಲಿ ಕುಳಿತು ತಯಾರಿಸಿದ ಕಾರಣ ನಿಪಿ.6 ರಲ್ಲಿ ಸದ್ರಿ ಅಂಶಗಳು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.8 ಮತ್ತು 28 ಗಳನ್ನು ಠಾಣಾ ಆವರಣದಲ್ಲಿ ತೆಗೆಯಲಾಗಿದೆ ಎಂದರೆ ಸರಿ.

ನಾನು ಸಮರ್ಥ್ಯ ತನಿಖಾಧಿಕಾರಿಯಾಗದೇ ಯಾವುದೇ ಅಂಶ ಕಂಡು ಬರದೇ ಇದ್ದರೂ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣವನ್ನು ಅಂತಿಮಗೊಳಿಸಲು ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ.1ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಗಾಯದ ಪ್ರಮಾಣಪತ್ರದ ಪ್ರಕಾರ ಆತನ ಸೊಂಟದ ಮೂಳೆ ಮುರಿತವಾಗಿದೆ ಎಂದರೆ ಸರಿ. ಅಪಘಾತವಾದ ಒಂದೇ ಗಂಟೆಯಲ್ಲಿ ಆತನ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಆತನೇ ಸ್ವತಃ ತೀವ್ರ ಸ್ವರೂಪದ ಗಾಯಗಳಿಗೆ ಒಳಗಾಗಿ ಚಿಕಿತ್ಸೆಯಲ್ಲಿದ್ದ ಕಾರಣ ಬುಲೆರೋ ವಾಹನದ ನಂಬರು ಹಾಗೂ ಅದರ ಚಾಲಕ ಹಾಗೂ ಪ್ರಯಾಣಿಕರ ವಿವರಣೆಯನ್ನು ನೀಡಲು ಸಾಧ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ಅಸಹಜವಾಗಿ ನಮಗೆ ಬೇಕಾದ ರೀತಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುವುದು ತನಿಖೆಯಲ್ಲಿ ಗೋಚರಿಸಬೇಕಾಗಿತ್ತು ಎಂದರೆ ಸರಿಯಲ್ಲ. ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದು, ಅದಕ್ಕೆ ಪೂರಕವಾಗಿ ಸಾಕ್ಷಿ ನುಡಿಯುತ್ತಿದುದ, ಅಪಘಾತಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**